ಆ) ಸದರಿ ನದಿಗಳ ದಂಡೆಯ ಪ್ರದೇಶವನ್ನು ಒತ್ತುವರಿ ಮಾಡಿರುವವರ ಮೇಲೆ ಯಾವ ಕಂದಾಯವನ್ನು ವಿಧಿಸಿರುವುದಿಲ್ಲ.

ಇ) ಈಗಾಗಲೇ ಸ್ಥಳೀಯ ಜನರ ಅಹವಾಲು (ದೂರು) ಮೇರೆಗೆ ಹರಿಯೂರು ಸಮೀಪವಿರುವ ಸುಮಾರು ೧೫ರಿಂದ ೨೦ ಎಕರೆ ಒತ್ತುವರಿ ಭೂಮಿಯನ್ನು ಖುಲ್ಲಾ ಪಡಿಸಲಾಗಿದೆ. ಮತ್ತು ಉಳಿದಿರುವ ಒತ್ತುವರಿ ಹಾಗೂ ಅನಧಿಕೃತ ಸಾಗುವಳಿದಾರರನ್ನು ಖುಲ್ಲಾಪಡಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಆರ್. ರಾಮಯ್ಯ.— (ಆ) ಪ್ರಶ್ನೆಗೆ ಉತ್ತರವಾಗಿ ಎರಡು ನದಿಗಳ ದಂಡೆಯ ಪ್ರದೇಶದಲ್ಲಿ ಅನಧಿಕೃತವಾಗಿ ಜಮೀನನ್ನು ಒತ್ತುವರಿ ಮಾಡಿದ್ದಾರೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅವರು ನದಿಯನ್ನೇ ಒತ್ತುವರಿ ಮಾಡಿದ್ದಾರೆಂದು ಹೇಳಬೇಕಾಗಿದೆ. ಈಗ ಆ ನದಿ ಒಂದು ಚರಂಡಿ ರೀತಿಯಲ್ಲಿ ಕಾಣುತ್ತಿದೆ. ಈ ರೀತಿ ಒತ್ತುವರಿ ಮಾಡಿರುವುದರಿಂದ ಸಾರ್ವಜನಿಕರ ಉಪಯೋಗಕ್ಕೆ ಮತ್ತು ದನ ಕರುಗಳಿಗೆ ಬಹಳ ತೊಂದರೆಯಾಗಿರುವುದು ಸಚಿವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಹೇಳುವುದರಲ್ಲಿ ಸಂತ್ಯಾಂಶ ಇದೆ. ಈಗಾಗಲೇ ೨೦ ಎಕರೆ ಅತಿಕ್ರಮಣ ಮಾಡಿದವರನ್ನು ಹೊರಕ್ಕೆ ಹಾಕಿದ್ದೇವೆ. ಇನ್ನುಳಿದವರು ಯಾರು ಮಾಡಿದ್ದಾರೆ ಅವರ ಬಗ್ಗೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್, ರಾಮಯ್ಯ.—ಒತ್ತುವರಿ ಮಾಡಿರುವವರ ಮೇಲೆ ಯಾವ ಕಂದಾಯವನ್ನು ವಿಧಿಸಿರುವುದಿಲ್ಲ ಎಂದು ಹೇಳಿದ್ದಾರೆ. ಒತ್ತುವರಿ ಮಾಡಬಾರದೆಂಬ ಸರ್ಕಾರದ ಸುತ್ತೋಲೆಯನ್ನು ಜನರು ಉಲ್ಲಂಘನೆ ಮಾಡಬೇಕಾದರೆ ಸಂಬಂಧಪಟ್ಟವರ ಕುಮ್ಮಕ್ಕು ಇದ್ದೇ ಇರುತ್ತದೆ. ಅಲ್ಲಿ ಅವರು ಒತ್ತುವರಿ ಮಾಡಿ ಸಾಗುವಳಿ ಮಾಡಬೇಕಾದರೆ ಅಧಿಕಾರಿಗಳು ಇಂತಿಷ್ಟು ಹಣ ಪಡೆದಿದ್ದಾರೆಂದು ತಿಳಿದು ಬಂದಿದೆ. ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅತಿಕ್ರಮಣ ಮಾಡಿದ್ದರೆ ಅವರನ್ನು ಹೊರಕ್ಕೆ ಹಾಕಬೇಕಾಗುತ್ತದೆ. ಇಲ್ಲಿ ದಂಡ ಹಾಕುವ ಪ್ರಶ್ನೆಯೇ ಇಲ್ಲ. ಯಾವುದೇ ಅಧಿಕಾರಿ ಕಾನೂನು ಬಾಹಿರವಾಗಿ ಹಣ ಪಡೆದಿದ್ದರೆ ವಿಚಾರಣೆ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ರಾಮಯ್ಯ.—ವಾಣಿವಿಲಾಸಪುರದಿಂದ ವೇದಾವತಿ ನದಿ ಏನು ಹರಿಯುತ್ತಿದೆ, ಆ ನದಿ ಉದ್ದಕ್ಕೂ ರೈತರು ಅನಧಿಕೃತವಾಗಿ ಸಾಗುವಳಿ ಮಾಡಿದ್ದಾರೆ. ಅವರನ್ನು ಅಲ್ಲಿಂದ ಖಾಲಿ ಮಾಡಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಹೇಳಿದಂತೆ ಅತಿಕ್ರಮಣ ಮಾಡಿದವರನ್ನು ಹೊರಕ್ಕೆ ಹಾಕಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ರಾಮಯ್ಯ.—ಅಲ್ಲಿ ಅವರನ್ನು ಖಾಲಿ ಮಾಡಿಸಿದ ತಕ್ಷಣ ಮತ್ತೆ ಸಾಗುವಳಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರೆ. ಆದಕ್ಕೋಸ್ಕರ ಅಲ್ಲಿ ಅಫೋರ್‌ಸ್ಟೇಷನ್ ಮಾಡಲಿಕ್ಕೆ ಮುರಗಳನ್ನು ಬೆಳಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ೧೫ ಎಕರೆಯಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಬರಗಾಲದ ಇದರಲ್ಲಿ ಅಫೋರ್‌ಸ್ಟೇಷನ್ ಮಾಡಲಿಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಮುಂದೆ ನಾವು ಪೊಸಿಷನ್ ತೆಗೆದುಕೊಂಡ ಮೇಲೆ ಅಲ್ಲಿ ಕೂಡ ಅದೇ ರೀತಿ ಮಾಡುತ್ತೇವೆ.

ಯಾದಗಿರಿ ಹೊಸ ಬಡಾವಣೆಗಳಿಗೆ ವಿದ್ಯುತ್ ದೀಪಗಳನ್ನು ಹಾಕಿಸುವ ಬಗ್ಗೆ.

೬೭೮. ಶ್ರೀ ಮಲ್ಲಿಕಾರ್ಜುನ ಖಾರ್ಗೆ (ಗುರುಮಿಠಕಲ್).—ಮಾನ್ಯ ವಿದ್ಯುತ್ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಆ) ಯಾದಗಿರಿ ಪುರಸಭೆಯವರಿಂದ ಹೊಸ ಬಡಾವಣೆಗಳಲ್ಲಿ ವಿದ್ಯುತ್ ಕಂಬಗಳನ್ನು ಹಾಕಲು ಮನವಿ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು ?

೫) ಹೊಸ ಬಡಾವಣೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡದಿರಲು ಕಾರಣಗಳೇನು ?

ಶ್ರೀ ಜಿ. ಎಸ್. ದೇಶಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಸಚಿವರು). —

ಅ) ಬಂದಿದೆ.

ಆ) ಯಾದಗಿರಿ ಪುರಸಭೆಯು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ರೂ. ೧೪, ೭೩, ೮೧೪, ೩೨ ಬಾಕಿಯನ್ನು ಅನೇಕ ಸಾರಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಪ್ರಾರ್ಥಿಸಿಕೊಂಡರೂ ಸಹ ಕೊಟ್ಟಿರುವುದಿಲ್ಲ ಬಾಕಿಯನ್ನು ತೀರಿಸಿದಲ್ಲಿ ಕೂಡಲೇ ಬೀದಿ ದೀಪಗಳನ್ನು ಹೊಸ ಬಡವಾಣೆಗಳಿಗೆ ಹಾಕಿಕೊಡಲು ಏರ್ಪಾಡು ಮಾಡಲಾಗುವುದು.

ಚಂದ್ರಕಾಂತ್ ಬೆಲ್ಲದ.—ಗೈರುಹಾಜರಿ

೫) ಪುರಸಭೆಯು ವಿದ್ಯುತ್ ಮಂಡಳಿಗೆ ಹೆಚ್ಚಿನ ಬಾಕಿ ಕೊಡಬೇಕಾಗಿರುವುದರಿಂದ ಬೀದಿ ದೀಪಗಳನ್ನು ಹೊಸ ಬಡಾವಣೆಗಳಿಗೆ ಹಾಕಿ ಕೊಟ್ಟಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಯಾದಗೀರ್ ಮುನಿಸಿಪಾಲಿಟಿಯವರು ಸುಮಾರು ೧೪, ೭೩, ೮೧೪ ರೂಪಾಯಿಗಳನ್ನು ಬಾಕಿ ಕೊಡಬೇಕೆನ್ನುವ ನೆಪದಲ್ಲಿ ಇವತ್ತು ಎಕ್ಸ್‌ಟೆನ್‌ಷನ್ ಏರಿಯಾದಲ್ಲಿ ವಿದ್ಯುಚ್ಛಕ್ತಿ ಕಂಬಗಳನ್ನು ಹಾಕುತ್ತಿಲ್ಲ. ಇವತ್ತು ಬಡಾವಣೆಗಳಲ್ಲಿ ಮನೆ ಕಟ್ಟಿಸಿದವರಿಗೆ, ಬಹಳ ತೊಂದರೆಯಾಗಿದೆ. ಯಾದ್ಗೀರ್‌ನಲ್ಲಿ ಕೈಗಾರಿಕೆಗಳ ಮತ್ತು ಮಾರ್ಕೆಟ್‌ಗಳ ಬಡಾವಣೆಯಾಗುತ್ತಿದೆ. ಅಲ್ಲಿ ಯಾವುದೇ ಸೌಕರ್ಯ ಇಲ್ಲ. ಹಳ್ಳಿಯಿಂದ ಬಂದಿರತಕ್ಕ ಜನರಿಗೆ, ಮಾರುಕಟ್ಟೆಗಳಿಗೆ ದವಸಧಾನ್ಯಗಳನ್ನು ಒಯ್ಯುವಂಥವರಿಗೆ ತೊಂದರೆಯಾಗಿರುವುದರಿಂದ ಅಲ್ಲಿಯ ಜನರು ಸತ್ಯಾಗ್ರಹ ಮಾಡಿದ್ದಾರೆ. ಇವತ್ತು ಯಾದ್ಗೀರ್ ಟೌನ್ ಮಾತ್ರವಲ್ಲ. ರಾಜ್ಯದಲ್ಲಿರತಕ್ಕ ಎಲ್ಲಾ ಮುನಿಸಿಪಾಲಿಟಿಯವರು ಬಾಕಿಯನ್ನು ಉಳಿಸಿಕೊಂಡಿದ್ದಾರೆ. ಅವರಿಗೆಲ್ಲಾ ರಿಯಾಯಿತಿ ಕೊಟ್ಟಿದ್ದೀರಿ. ಕಾನೂನು ಮಾಡಿದರೆ ಎಲ್ಲ ಮುನಿಸಿಪಾಲಿಟಿಗಳಿಗೂ ಅನ್ವಯಿಸುವಂತೆ ಕಾನೂನು ಮಾಡಿ. ಇಲ್ಲದೇ ಹೋದರೆ. ಯಾದ್ಗೀರ್ ಮುನಿಸಿಪಾಲಿಟಿಗೆ ವಿದ್ಯುಚ್ಛಕ್ತಿ ಕಂಬಗಳನ್ನು ಹಾಕಿಸಿ ವಿದ್ಯುತ್ ಪೂರೈಸುವಂತೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಎಸ್. ದೇಶಮುಖ್.—ಸತ್ಯಾಗ್ರಹ ಮಾಡಿದ್ದಾರೆ. ತಾವು ಸಹಕಾರ ಮಾಡಿ ಬಾಕಿ ಬರುವಂತೆ ಮಾಡಿದರೆ, ಪೋಲು ಹಾಕಿಸುವುದಕ್ಕೆ ವಿದ್ಯುಚ್ಛಕ್ತಿ ಮಂಡಲಿಗೆ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬೇರೆ ಬೇರೆ ಜಿಲ್ಲೆಗಳಲ್ಲಿರುವಂಥ ಮುನಿಸಿಪಾಲಿಟಿಗಳಲ್ಲಿಯೂ ಬಾಕಿ ಉಳಿಸಿಕೊಂಡಿದ್ದಾರೆ. ಕಂತಿನ ಮೂಲಕ ಬೇಕಾದರೆ ವಸೂಲು ಮಾಡಿಕೊಳ್ಳಿ. ಮುನಿಸಿಪಾಲಿಟಿಯವರಿಗೆ ಹಣ ಕೊಡುವುದಕ್ಕೆ ಹಣ ಇಲ್ಲ. ಮಾನ್ಯ ಬೊಮ್ಮಾಯಿಯವರು ಹುಬ್ಬಳ್ಳಿ ಧಾರವಾಡಕ್ಕೆ ೬೫ ಲಕ್ಷ ರೂಪಾಯಿಗಳನ್ನು ಕೊಡಿಸಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಧರ್ಮಸಿಂಗ್ ರವರು ಇದ್ದಾಗ ಗುಲ್ಬರ್ಗ ನಗರಕ್ಕೆ ಎಷ್ಟು ತೆಗೆದುಕೊಂಡಿದ್ದಾರೆ ಎಂಬುದನ್ನು ಹೇಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವ ಯಾವ ಏರಿಯಾದಲ್ಲಿ ಪೋಲುಗಳು ಇಲ್ಲ. ಅಲ್ಲಿ ಹಾಕಿಸುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಜಿ. ಎಸ್. ದೇಶಮುಖ್.—ಬೀದಿ ದೀಪದ ಬಾಬ್ತು ಇರಲಿ, ಕುಡಿಯುವ ನೀರಿನ ಬಾಬ್ತು ಕೂಡ ಕೊಟ್ಟಿಲ್ಲ. ಮಾನ್ಯ ಸದಸ್ಯರಾದ ಖರ್ಗೆ ಯವರು ಸಹಕಾರ ನೀಡುತ್ತಾರೆಂದು ಭಾವಿಸಿ. ಬೀದಿ ದೀಪ ಹಾಕಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್. —ಗುರುಮಿಟ್‌ಕಲ್ ಮುನಿಸಿಪಾಲಿಟಿ ಸಣ್ಣ ಹಳ್ಳಿಯೊಳಗೆ ಬರುತ್ತೆ. ಸಣ್ಣ ಸಣ್ಣ ಗ್ರಾಮಗಳು ಇವೆ. ಬಾಕಿ ಉಳಿದಿದ್ದರೂ ಸಹ ಪೋಲು ಹಾಕುವಂಥ ಲೈಟು ಕೊಡುವಂಥ ಮತ್ತು ಬಂದ ಮಾಡದಂತೆ ಸರ್ಕಾರದವರು ಮಾಡುತ್ತಾರೆಂದು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿದ್ದಾರೆ ಇದನ್ನು ಕೂಡ ಸಣ್ಣ ಸಣ್ಣ ಪಟ್ಟಣಗಳಿಗೆ ಲಾಗು ಮಾಡಿ ಹಣ ಪಾವತಿ ಇದ್ದರೂ ಅದನ್ನು ಕಂತಿನ ಮೂಲಕ ವಸೂಲೂ ಮಾಡಿಕೊಂಡು ಲೈಟು ಹಚ್ಚುವಂಥ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜಿ. ಎಸ್. ದೇಶಮುಖ್.—ಪರಿಶೀಲನೆ ಮಾಡುತ್ತೇನೆ.

ಬಿಜಾಪುರ ಜಿಲ್ಲೆಯಲ್ಲಿ ಅಬಕಾರಿಯಿಂದ ಸಂದಾಯವಾದ ಪರಮಾನ

೧೦೯೮. ಶ್ರೀ ಜಿ. ಎಸ್. ಬಾಗಲಕೋಟೆ (ಜಮಖಂಡಿ).—ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೇ ?

ಅ) ೧೯೮೪-೮೫ ನೇ ಸಾಲಿನಲ್ಲಿ ಅಬಕಾರಿ ಇಲಾಖೆಯಿಂದ ರಾಜ್ಯಕ್ಕೆ ವಿಜಾಪುರ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಿಂದ ಸಂದಾಯವಾದ ಪರಮಾನವೆಷ್ಟು ?

ಶ್ರೀ ರಮೇಶ ಜಿಗ ಜಿಣಗಿ (ಅಬ್ಕಾರಿ ರಾಜ್ಯ ಮಂತ್ರಿಗಳು).—

ಅ) ವಿವರಗಳನ್ನು ಅನುಬಂಧ I ರಲ್ಲಿ ಕೊಡಲಾಗಿದೆ.

ANNEXURE—I

S. No.	Taluk	Excise Revenue collected for 1984-85.
1.	Bijapur	1, 66, 59, 117-53
2.	Indi	27, 79, 614-15
3.	Sindagi	13. 97, 892-69
4.	Bagalkot	18, 21, 605-83
5.	Badami	15, 90, 751-90
6.	Hungund	66, 00, 735-94
7.	Mudhol	51, 32, 561-00
8.	Bilgi	14 77, 62 -03
9.	Jamakhandi	6, 71, 16, 210-50
10.	Muddebihal	25, 41, 913-40
11.	Bagewadi	20, 41, 167-03
	Total	11, 01, 59, 192-00

ಶ್ರೀ ಜಿ. ಎಸ್. ಬಾಗಲಕೋಟೆ.—ಮಾನ್ಯ ಉಪಾಧ್ಯಕ್ಷರೇ, ಇಡೀ ಜಿಲ್ಲೆಯಲ್ಲಿ ೬, ೭೧ ೦೬, ೨೧೨-೫೦ ಪೈಸೆ ಆದಾಯ ಇದ್ದು ನನ್ನ ತಾಲ್ಲೂಕು ಹೆಚ್ಚು ಉತ್ಪನ್ನ ಕೊಡುತ್ತಿದೆ. ಆ ತಾಲ್ಲೂಕಿನ ಅಭಿವೃದ್ಧಿಗಾಗಿ ಸರ್ಕಾರದವರು ಯೋಜನೆಗಳನ್ನು ಕೈಗೊಳ್ಳುವಂಥಾದ್ದು ಇದೆಯೆ ?

ಶ್ರೀ ರಮೇಶ. ಸಿ. ಜಿಗಜಿಣಗಿ.—ಮಾನ್ಯ ಸದಸ್ಯರ ಪ್ರಶ್ನೆ ನನ್ನ ಖಾತೆಯ ವ್ಯಾಪ್ತಿಗೆ ಬರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಕಳೆದ ಬಾರಿ ಎಷ್ಟು ಆದಾಯ ಬಂದಿತ್ತು ? ಈ ಸಾರಿ ಕಳೆದಬಾರಿಗಿಂತ ಕಡಿಮೆಯಾಗಿದೆಯೆ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಈ ಪ್ರಶ್ನೆ ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಂತ್ರಿಯವರು ಈ ರೀತಿ ಪಾತನಾಡುವುದು ಸರಿಯಲ್ಲ ಸದನದಲ್ಲಿ ಪ್ರಶ್ನೆಗಳು ಬಂದಾಗ ಆನೇಕ ಉಪ ಪ್ರಶ್ನೆಗಳನ್ನು ಕೇಳುತ್ತಾರೆಂದು ತಿಳಿದುಕೊಂಡು ಬರಬೇಕಾಗು